





ಇನ್ನು ಅಲಂಕಾರಕ್ಕಾಗಿ ಹಲವಾರು ನಮೂನೆಯ ವಸ್ತುಗಳು ದೊರಕಿದರೂ ಅವುಗಳನ್ನು ಸಮಯ ಸಂದರ್ಭಕ್ಕನುಗುಣವಾಗಿ ಹೊಂದಾಣಿಕೆಯಲ್ಲಿ ಜೋಡಿಸುವುದರಿಂದ ಇನ್ನೂ ಆಕರ್ಷಕ.

★ *ಆರ್ಟ್ ಎಂಡ್ ಸೋಲ್*

ಧ್ಯಾನಸ್ಥ ವಿಗ್ರಹ ಅಥವ ಕೆತ್ತನೆಯ ಕಲಾಕೃತಿಯನ್ನು ಲ್ಯಾಂಡ್ ಸ್ಕೇಪ್ ವಿನ್ಯಾಸದಲ್ಲಿ ಬಳಸಿಕೊಳ್ಳುವುದರಿಂದ ಎಲ್ಲರ ಹೃದಯವನ್ನೂ ಸೆಳೆಯಬಹುದು. ಹೊರಾಂಗಣ ವಿನ್ಯಾಸದಲ್ಲಿ ಕಲೆಯ ಕಾಂಬಿನೇಶನ್ ಚಿತ್ತಾಕರ್ಷಕವಾಗಿರುತ್ತದೆ. ಖಾಲಿ ಗೋಡೆಗಳಲ್ಲಿ ಮ್ಯೂರಲ್‌ಗಳು, ವಿವಿಧ ಪೈಂಟಿಂಗ್ಸ್, ಕಪ್ಪೆಚಿಪ್ಪು ಶಿಲೆಕಲ್ಲುಗಳು ಇತ್ಯಾದಿ ವಿವಿಧ ವಸ್ತುಗಳಿಂದ ಬಿಡಿಸಿದ ರಂಗೋಲಿಗಳು, ಗಾಳಿಯ ಘಂಟಾನಾದ ಇವುಗಳೆಲ್ಲಾ ವಿಶೇಷ ಮೆರುಗು ನೀಡಬಲ್ಲದು. ಇನ್ನು ವಿವಿಧ ವಿನ್ಯಾಸ– ಆಕರ್ಷಕ ಬಣ್ಣದ ಹೂಕುಂಡಗಳನ್ನು ಹೊಸ ನಮೂನೆಯಲ್ಲಿ ಜೋಡಿಸಿಯೂ ಅಂದ ಹೆಚ್ಚಿಸಬಹುದು.

★ *ಟೆಕ್ಸ್‌ಚರ್ ಮತ್ತು ಅನುಭವ*

ಬಣ್ಣದ ಕುಂಡಗಳು ಮತ್ತು ಹೂಜಿಗಳನ್ನು ಅಳವಡಿಸಿ ಹೊಸತನ ಮೆರೆಯಬಹುದು. ಶಿಲೆಕಲ್ಲು ಅಥವ ನದಿಬದಿಗಳಲ್ಲಿ ದೊರಕುವ ವಿವಿಧ ಆಕಾರದ ಕಲ್ಲುಗಳನ್ನು ಜೋಡಿಸಿ ಹೊಸ ಟೆಕ್ಸ್‌ಚರ್ ಸೃಷ್ಟಿಸಿ ಸ್ಪರ್ಷದ ಅನುಭವ ಪಡೆಯಬಹುದು. ಎಲೆಗಳ ಗುಚ್ಛಗಳ ಗಿಡಗಳು, ಬಿದಿರು ಹಾಗು ಇತರ ಮಾದರಿಯ ಹುಲ್ಲನ್ನು ಬೆಳೆಸಬಹುದು. ಜುಳುಜುಳು ಹರಿಯುವ ನೀರು, ಕೃತಕ ಜಲಪಾತ ಅಥವ ಕೊಳಗಳನ್ನು ಸೃಷ್ಟಿಸಿ ಉದ್ಯಾನದ ಮೆರುಗನ್ನು ಹೆಚ್ಚಿಸಬಹುದು. ಬಿದಿರ ಎಲೆಗಳು ಹಾಗೂ ಇತರ ಮಾದರಿಯ ಹುಲ್ಲುಗಳನ್ನು ಬೆಳೆಸಿ ಲ್ಯಾಂಡ್‌ಸ್ಕೇಪ್ ವಿನ್ಯಾಸಗೊಳಿಸಬಹುದು.

★ *ನೀರ ಸೆಲೆ*

ಲ್ಯಾಂಡ್‌ಸ್ಕೇಪ್ ವಿನ್ಯಾಸದಲ್ಲಿ ನೀರು ಕೂಡ ಅತ್ಯಂತ ಪ್ರಮುಖವಾದ ಅಂಶ. ಜುಳುಜುಳು ಹರಿಯುವ ನಾದ, ಜಲಧಾರೆಯ ಇಂಪು, ಸ್ಪಟಿಕದಂತೆ ಹೊಳೆಯುವ ಕೊಳಗಳು, ಚಿಮ್ಮುವ ಕಾರಂಜಿಗಳು, ಕೊಳದಲ್ಲಿಯ ಬಾತು, ತಾವರೆ ಇತ್ಯಾದಿಗಳು ನೋಡುಗರ ವಿಶೇಷ ಗಮನ ಸೆಳೆಯಬಲ್ಲದು ಎಂದು ಇವರು ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಾರೆ.

ಲ್ಯಾಂಡ್ ಸ್ಕೇಪಿಂಗ್ ಗಾರ್ಡನ್‌ನಲ್ಲಿ ನಮ್ಮ ಅಭಿರುಚಿ ಮತ್ತು ಕಟ್ಟಡದ ವಿನ್ಯಾಸಕ್ಕೆ ತಕ್ಕಂತೆ ನಿರ್ಮಿಸಲಾಗುತ್ತದೆ. ಉದ್ಯಾನ ವಿನ್ಯಾಸದಲ್ಲಿ ಗಿಡಗಳು ಪ್ರಮುಖ ವಸ್ತು. ಹಲವು ನಮೂನೆಯ ಗಿಡ, ಮರ, ಬಳ್ಳಿಗಳು, ಕ್ಯಾಕ್ಟಸ್‌ಗಳು ಇತ್ಯಾದಿಗಳು ಹೊರಾಂಗಣ ವಿನ್ಯಾಸದಲ್ಲಿ ಇಂದ್ರಜಾಲವನ್ನೇ ಸೃಷ್ಟಿಸಬಲ್ಲದು. ವಿವಿಧ ಬಣ್ಣಗಳು ಮತ್ತು ತನ್ನ ಸುವಾಸನೆಯಿಂದ ಉದ್ಯಾನದ ಸೊಬಗನ್ನು ಇವು ಇಮ್ಮಡಿಗೊಳಿಸುತ್ತದೆ. ಹಸಿರು ಹುಲ್ಲು ಬೆಳೆಸಿದರಂತೂ ಉದ್ಯಾನ ಅದ್ಭುತ. ಮಲ್ಲಿಗೆ, ಜಾಜಿ ಹೀಗೆ ಸುಗಂಧಬರಿತ ಹೂವುಗಳ ಬಳ್ಳಿಗಳನ್ನು ಹಬ್ಬಿಸಿ ಲತಾ ಮಂಟಪ ಮಾಡಬಹುದು. ಇನ್ನು ಆಯುರ್ವೇದಿಯ ಗುಣಗಳುಳ್ಳ ಗಿಡಗಳನ್ನು ಬೆಳೆಸಿ ಉದ್ಯಾನವನದ ಶ್ರೀಮಂತಿಕೆಯನ್ನು ಹೆಚ್ಚಿಸಬಹುದು.

ಕ್ಯಾಕ್ಟಸ್ ಅಥವಾ ಇತರ ನೀರು ಮತ್ತು ಗೊಬ್ಬರ ಕಡಿಮೆ ಬೇಡುವ ಗಿಡಗಳನ್ನು ಬೆಳೆಸಿಯೂ ಗಾರ್ಡನ್ ನಿರ್ಮಿಸಿದರೆ ಪಾಲನೆ– ಪೋಷಣೆಗೂ ಸುಲಭ; ನೋಡಲೂ ಆಕರ್ಷಕ. ಉತ್ತಮ ನಿರ್ವಹಣೆ ಇಲ್ಲದಿದ್ದರೆ ಉದ್ಯಾನ ಸೊರಗಿ ಅಂದಗೆಡುತ್ತದೆ. ಮನೆಯ ಮುಂದೆ ಅಂದದ ಗಾರ್ಡನ್ ನಿರ್ಮಾಣವು ಎಷ್ಟು ಮುಖ್ಯವೋ ಹಾಗೆ ಇದರ ಪಾಲನೆಯೂ ಅತೀ ಅಗತ್ಯ.

ಲ್ಯಾಂಡ್ ಸ್ಕೇಪಿಂಗ್‌ನ ಉದ್ಯಾನವನದಿಂದಾಗಿ ಮನೆಗೊಂದು ನೂತನ ನೋಟ ಪಡೆಯಬಹುದು. ಅತೀ ಸಣ್ಣ ಸ್ಥಳದಲ್ಲಿ ಅಚ್ಚುಕಟ್ಟಾಗಿ ಬೆಳೆಸಿದ ವಿವಿಧ ಜಾತಿಯ ಹಸಿರು ಗಿಡಗಳಲ್ಲಿ ಹೂವು ಅರಳಿದಾಗ ಸುಂದರ ಕೊಳದಲ್ಲಿ ಅರಳಿದ ತಾವರೆಯನ್ನು ಕಂಡಾಗ ಮೈಮನ ಹಗುರವಾಗುತ್ತದೆ. ಇಂಥ ಗಾರ್ಡನನ್ನು ನೋಡುವುದು ಕಣ್ಣಿಗೆ ಹಬ್ಬ, –ಮನಸ್ಸಿಗೂ ರಿಲಾಕ್ಸ್. ಸ್ಥಳಾವಕಾಶವಿದ್ದರೆ ಗಾರ್ಡನ್‌ನಲ್ಲಿ ಆಸನದ ವ್ಯವಸ್ಥೆ, ಕಾಫಿ ಟೇಬಲ್ ಹಾಕಿ ಸ್ನೇಹ ಕೂಟಗಳನ್ನೂ ವ್ಯವಸ್ಥೆ ಮಾಡಬಹುದು.

ಮನೆಯ ಮಹಡಿಯ ಮೇಲೆ, ಬಾಲ್ಕನಿ, ಹಿತ್ತಿಲಲ್ಲಿಯೂ ಈ ರೀತಿ ಯೋಜಿತ ಗಾರ್ಡನ್ ನಿರ್ಮಿಸಿ ಅಚ್ಚುಕಟ್ಟುತನವನ್ನು ಮೆರೆಯಬಹುದು. ಲ್ಯಾಂಡ್ ಸ್ಕೇಪಿಂಗ್ ಮಾದರಿಯಲ್ಲಿ ನೀವು ಕಡಿಮೆ ನೀರು ಮತ್ತು ಜಾಗವನ್ನು ಉಪಯೋಗಿಸಿ ಸುಲಭದಲ್ಲಿ ನಿರ್ವಹಣೆ ಮಾಡಬಹುದಾದ ಆಕರ್ಷಕ ರೀತಿಯ ಗಾರ್ಡನ್ ನಿರ್ಮಿಸಬಹುದು.